**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**<u>ಅಪರಾಧ ಪ್ರಕರಣ ಸಂಖ್ಯೆಃ 1023/2023</u>**

| | | |
|---|---|---|
| **ಸಾಕ್ಷಿಯ ಹೆಸರು** | ಪಾಂಡುರಂಗನ್ ಜಿ. ಬಿನ್ ಗೌರಯ್ಯ | ಚಾಸಾ- 3 |
| **ಉದ್ಯೋಗ** | ಅಬಕಾರಿ ಪೇದೆ , ಹಾಸನ ವಲಯ | ಪ್ರಾಸಾ- 4 |
| **ವಾಸ ಸ್ಥಳ** | ಗೊರೂರು | |
| **ದಿನಾಂಕಃ 28.08.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆ</u>** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ.

ನಾನು 20.07.2019 ರಿಂದ 28.10.2024 ರವರೆಗೆ ನಾನು ಸಕಲೇಶಪುರ ಉಪ ವಿಭಾಗದಲ್ಲಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕ 08.08.2023 ರಂದು ಚಾಸಾ 4 ಮತ್ತು 5 ರವರ ಜೊತೆ ನಾನು ದಸ್ತುಕಾರ್ಯ ಮಾಡುತ್ತಿರುವಾಗ ಚಾಸಾ 5 ರವರಿಗೆ ಮಾಹಿತಿ ಬಂದಿದ್ದು ರಾಮನಾಥಪುರ ಮತ್ತು ಅರಕಲಗೂಡು ರಸ್ತೆಯ ಮುತ್ತಿಗೆ ಗ್ರಾಮದ ಗೋಲ್ಡನ್ ಬ್ರಿಜ್ ಡಾಬಾದಲ್ಲಿ ಆರೋಪಿ ಮಧ್ಯ ಮಾರಾಟ ಉದ್ದೇಶದಿಂದ ಮಧ್ಯವನ್ನು ಸಂಗ್ರಹ ಮಾಡಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ನಾವು ಮುತ್ತಿಗೆ ಗ್ರಾಮಕ್ಕೆ ಹೋಗಿ ಅಲ್ಲೇ ರಸ್ತೆಯ ಬದಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ನಮಗೆ ಬಂದ ಮಾಹಿತಿಯ ಬಗ್ಗೆ ಅವರಿಗೆ ತಿಳಿಸಿ ಪಂಚರಾಗಿ ಸಹಕರಿಸಿಸಲು ಕೋರಿದ್ದು ಅವರು ಒಪ್ಪಿದ್ದ ಕಾರಣ ಅವರಿಗೆ ಸ್ಥಳದಲ್ಲಿಯೇ ನೋಟೀಸು ತಯಾರಿಸಿ ಅವರಿಗೆ ನೀಡಿ ಅವರ ಸಹಿ ಪಡೆದು ನಮಗೆ ಮಾಹಿತಿ ಬಂದಿದ್ದು ಸ್ಥಳಕ್ಕೆ ಹೋಗಿರುತ್ತೇವೆ.

ನಮ್ಮನ್ನು ನೋಡಿ ಸದರಿ ಡಾಬಾದ ಮುಂದಿದ್ದ ಒಬ್ಬ ವ್ಯಕ್ತಿಯು ಓಡಿ ಹೋಗಲು ಪ್ರಯತ್ನಿಸಿರುತ್ತಾನೆ. ಆತನನ್ನು ಹಿಡಿಯಲು ಪ್ರಯತ್ನಿಸಿದ್ದು ಆತನ ಅಲ್ಲಿ ಇದ್ದ ಜೋಳದ ಹೊಲಕ್ಕೆ ಹೋಗಿರುತ್ತಾನೆ ಆದರಿಂದ ಆತನನ್ನು ಹಿಡಿಯಲು ಆಗಿರುವುದಿಲ್ಲ. ನಂತರ ಸ್ಥಳದಲ್ಲಿಯೋ ಪಂಚರ ಸಮಕ್ಷಮ ಸದರಿ ಡಾಬಾವನ್ನು ಶೋಧನೆ ಮಾಡಲಾಗಿ ಡಾಬಾದೊಳಗಿನ ಅಡುಗೆ ಕೋಣೆಯ ಪಕ್ಕದಲ್ಲಿ ಒಂದು ರಟ್ಟಿನ ಬಾಕ್ಸ್ ಇದ್ದುದ್ದು ಕಂಡುಬಂದಿರುತ್ತದೆ. ಸದರಿ ರಟ್ಟಿನ ಬಾಕ್ಸಿನಲ್ಲಿ 90 ಎಂ ಎಲ್ ನ 24 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕ್ಟೆಗಳಿದ್ದವು. 180 ಮಿಲೀ 12 ಓಲ್ಡ್ ಟೆವರಿನ್ ವಿಸ್ಕಿ ಮತ್ತು 180ಮಿಲೀ ಯ 10 ಬ್ಯಾಕ್ ಪೈಪರ್ ವಿಸ್ಕಿ ಮತ್ತು 180 ಮಿಲೀ ಯ 5 XXX ಮ್ಯಾಕ್ಡೋವೆಲ್ಸ್ ರಮ್ ಗಳಿದ್ದವು. ಅಲ್ಲಿ ಸಿಕ್ಕಂತಹ ಮುದ್ದೆ ಮಾಲುಗಳನ್ನು ತೆಗೆದುಕೊಂಡು ಸ್ಥಳದಲ್ಲಿಯೇ ರಾಸಾಯನಿಕ ಪರೀಕ್ಷೆಗಾಗಿ 90 ಎಂ ಎಲ್ ನ 24 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕ್ಟೆಗಳ ಪೈಕಿ 10 ಪ್ಯಾಕ್ಟೆಗಳನ್ನು, 180 ಮಿಲೀ 12 ಓಲ್ಡ್ ಟೆವರಿನ್

ವಿಸ್ಕಿ ಪೈಕಿ 3 ಪ್ಯಾಕನ್ನು ಮತ್ತು 180ಮಿಲೀ ಯ 10 ಬ್ಯಾಕ್ ಪೈಪರ್ ವಿಸ್ಕಿ ಪೈ 3 ಪ್ಯಾಕನ್ನು ಮತ್ತು 180 ಮಿಲೀ ಯ 5 XXX ಮ್ಯಾಕ್ಡೋವೆಲ್ಸ್ ರಮ್ ಪೈಕಿ 3 ಪ್ಯಾಕೆಟ್ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಪ್ಲಾಸ್ಟಿಕ್ ಬಟ್ಟೆಯಲ್ಲಿ ಸುತ್ತಿ ಅರಗನ್ನು ಹಾಕಿ ಇಲಾಖಾ ಸೀಲ್ 330 ಎಂದು ಮೊಹರು ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಚೀಟಿ ಮತ್ತು ಮಾದರಿ ಸೀಲಿನ ನಮೂನೆಯನ್ನು ತಯಾರಿಸಲಾಯಿತು. ಸದರಿ ಮಾದರಿ ಚೀಟಿಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಯ ಮೇಲೆ ಅಂಟಿಸಲಾಯಿತು ಮತ್ತು ಆ ಕಾಲಕ್ಕೆ ಛಾಯ ಚಿತ್ರಗಳನ್ನು ತೆಗೆಯಲಾಯಿತು. ಸದರಿ ಮಹಜರ್ ಅನ್ನು ಆ ದಿನದ ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ಮಾಡಿ ಸಹಿ ಹಾಕಲಾಯಿತು. ನಿಪಿ 1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಡಿ ಎಂದು ಗುರುತಿಸಲಾಯಿತು. ಈ ವಿಚಾರವಾಗಿ ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ . ನ್ಯಾಯಾಲಯುದ ಮುಂದಿರುವ ಮುಮ 1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯುದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**<u>ಪಾಟೀ ಸವಾಲುঃ</u>** ಆರೋಪಿ ಪರ **ಶ್ರೀ. ಎನ್.ಕೆ.** ವಕೀಲರಿಂದ:

ದಿ 08.08.2023 ರಂದು ಸಕಲೇಶಪುರದಿಂದ ಅರಕಲಗೂಡಿಗೆ ಯಾವ ಕಾರಣಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿ ಆ ಕಾಲಕ್ಕೆ ವಿಧಾನ ಸಭಾ ಚುನಾವಣೆ ಕಾರಣಕ್ಕೆ ಗಸ್ತುಗೆ ಮಾಡಲು ಬಂದಿರುತ್ತೇನೆ. ಆ ದಿನ ನನ್ನೊಂದಿಗೆ ಚಾಸಾ 4 ಮತ್ತು 5 ರವರು ಬಂದಿದ್ದರು. ಆ ದಿನ ನಾವು ಸಕಲೇಶಪುರವನ್ನು ಬೆಳಗ್ಗೆ 10 ಗಂಟೆಗೆ ಬಿಟ್ಟಿರುತ್ತೇವೆ. ನಾವು ಸಕಲೇಶಪುರದಿಂದ ಕೊಡ್ಲಿಪೇಟೆ, ಮಲ್ಲಿಪಟ್ಟಣ ಮಾರ್ಗವಾಗಿ ಅಕರಲಗೂಡಿಗೆ ಬಂದಿರುತ್ತೇವೆ. ನಾವು ಅರಕಲಗೂಡಿಗೆ ಬಂದಾಗ ಸಮಯ ಎಷ್ಟಾಗಿತ್ತು ಎಂಬುದು ಈಗ ನೆನಪಿರುವುದಿಲ್ಲ. ಮಾಹಿತಿ ಬಂದಾಗ ನಾನು ರಾಮನಾಥಪುರದ ಬಳಿ ಇದ್ದೆ ಆಗ ಸಮಯ ಮಧ್ಯಹ್ನ 03.15 ಆಗಿತ್ತು. ರಾಮನಾಥಪುರದ ಯಾವ ಸ್ಥಳದಲ್ಲಿ ನಿಖರವಾಗಿದ್ದೆ ಎಂದು ಈಗ ನನಗೆ ನೆನಪಿರುವುದಿಲ್ಲ. ರಾಮನಾಥಪುರದಿಂದ ಅರಕಲಗೂಡು ಸುಮಾರು 15 ರಿಂದ 20 ಕಿಮಿ ಇರುತ್ತದೆ. ರಾಮನಾಥಪುರದಿಂದ ಮುತ್ತಿಗೆ ಗ್ರಾಮ ಸುಮಾರು 10 ಕಿಮೀ ಇರುತ್ತದೆ. ಅರಕಲಗೂಡು ರಾಮನಾಥಪುರ ಹೆದ್ದಾರಿಯಿಂದ ಮುತ್ತಿಗೆ ಗ್ರಾಮ ಸುಮಾರು 3 ರಿಂದ 4 ಕಿಮೀ ದೂರದಲ್ಲಿದೆ. ನಮಗೆ ಮಾಹಿತಿ ಬಂದ ಕೂಡಲೇ ನಾವು ಮುತ್ತಿಗೆ ಗ್ರಾಮಕ್ಕೆ ಹೊರಟೆವು.

ಗೋಲ್ಡನ್ ಬ್ರಿಜ್ ಡಾಬಾವು ಅರಕಲಗೂಡು ರಾಮನಾಥಪುರ ದಾರಿಯ ಪಶ್ಚಿಮ ದಿಕ್ಕಿನಲ್ಲಿರುತ್ತದೆ. ರಾಮನಾಥಪುರ ಅರಕಲಗೂಡು ರಸ್ತೆಯು ಉತ್ತರ ದಕ್ಷಿಣ ದಿಕ್ಕಿಗೆ ಇದೆ. ನಾವು ಆ ದಿನ ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಮಧ್ಯ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಧರಿಸಿದ್ದರಿದ್ದರು ಎಂಬುದು ನನಗೆ ನೆನಪಿಲ್ಲ. ಆ ದಿನ ಆರೋಪಿ ಪಶ್ಚಿಮ ದಿಕ್ಕಿಗೆ ಓಡಿ ಹೋದನು. ಆರೋಪಿ ಯಾವುದೇ ತಪ್ಪು ಮಾಡಿದಿದ್ದರು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆಂದರೆ ಸರಿಯಲ್ಲ. ಆ ದಿನ  ನಾವು ಯೂವುದೇ ದಾಳಿ ಮಾಡಿರುವುದಿಲ್ಲ, ಯಾವುದೇ ಮುದ್ದೆ ಮಾಲು ಸಿಕ್ಕಿರುವುದಿಲ್ಲ ಮತ್ತು ಅದನ್ನು ನಾವು ವಶಪಡಿಸಿಕೊಂಡಿರುವುದ್ಲಿ ಮತ್ತು ಸ್ಥಳದಲ್ಲಿ ಪಂಚರು ಇರುವುದಿಲ್ಲ ಮತ್ತು ಆ ಕಾಲಕ್ಕೆ ಮಹಜರ್ ಮಾಡಿ ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಮುಮ 1 ನ್ನು ಈ ಪ್ರಕರಣಕ್ಕೋಸ್ಕರ ನಾವು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ.

**ಮರು ವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಧೀಶರು,**
**ಅರಕಲಗೂಡು.**